8 : ಶಾಸನ ರಚನೆ :

ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ 2013.

ಅಧ್ಯಕ್ಷರು : ಕರ್ನಾಟಕ ಪಂಚಾಯತ್ ರಾಜ್(ತಿದ್ದುಪಡಿ) ವಿಧೇಯಕ–2013, ಅನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮಂಡಿಸಲು ಅನುಮತಿಯನ್ನು ಕೋರುವುದು ಹಾಗೂ ವಿಧೇಯಕವನ್ನು ಮಂಡಿಸುವುದು.

ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, 2013ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ)ವಿಧೇಯಕವನ್ನು ಮಂಡಿಸಲು ಸಭೆಯ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವನೆ ಮಂಡಿಸಲಾಯಿತು.

ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ:

2013ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿ ನೀಡಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕೃತವಾಗಿದೆ.

ಮಾನ್ಯ ಸಚಿವರು ಈಗ ದಯವಿಟ್ಟು ವಿಧೇಯಕವನ್ನು ಮಂಡಿಸಬೇಕು.

ಶ್ರೀ ಹೆಚ್.ಕೆ.ಪಾಟೀಲ್ (ಮಾನ್ಯ ಗ್ರಾಮೀಗಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ 2013ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್(ತಿದ್ದುಪಡಿ) ವಿಧೇಯಕವನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಯಿತು.

(ಅನುಬಂಧ – 1)

ಶ್ರೀ ಹೆಚ್.ಕೆ.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಬಹಳಷ್ಟು ಏನೂ ಇಲ್ಲ, ಬಹಳ ಶಾಂತವಾತಾವರಣ ಇದೆ.

ಶ್ರೀ ಜಗದೀಶ್ ಶೆಟ್ಟರ್ : ನೋಡಿ response ಬರಲಿ. ಕೆಳಗಿನ ವ್ಯವಸ್ಥೆಯಲ್ಲಿ ಏನೇನು ಲೋಪದೋಷಗಳು ಇವೆ ಅವು ಬರಲಿ. ಈಗ ಸಂಜೆ 7 ಗಂಟೆ ಆಗಿದೆ, ಈಗ ಕೊನೆಯ ಸಮಯದಲ್ಲಿ ಬಿಲ್ ತಂದರೆ ಹೇಗೆ?

ಅಧ್ಯಕ್ಷರು : ಆಯಿತು, ಏನೂ ತಕರಾರು ಇಲ್ಲ.

ಶ್ರೀ ಎನ್.ಚಲುವರಾಯಸ್ವಾಮಿ : ಇನ್ನೂ detail ಆಗಿ ಹೋಗಿ ತೆಗೆದುಕೊಂಡು ಬಂದಿದ್ದರೆ ಒಳ್ಳೆಯದು. ನಿಮ್ಮ ಕೈಯಿಮದ ತರುವುದಕ್ಕೆ ಸಾಧ್ಯ. ನಿಮ್ಮ ಕಾಲದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ತರಬೇಕು.

ಶ್ರೀ ಹೆಚ್.ಕೆ.ಪಾಟೀಲ್ : ಅದನ್ನು ಮಾಡೋಣ. ಅದರ ಜೊತೆಯಲ್ಲಿ ಇದನ್ನು ಮಾಡೋಣ. ಆ ಬಿಲ್ ತರುವುದಕ್ಕೆ ಮುಂಚೆ ನಿಮ್ಮ ಜೊತೆಯಲ್ಲಿ ಚರ್ಚೆ ಮಾಡಿ ಸಮಗ್ರವಾದ ವಿಧೇಯಕವನ್ನು ತರುತ್ತೇನೆ.

9. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲೆ ಮುಂದು ವರದ ಚರ್ಚೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : (ಮಾಗಡಿ) ಮಾನ್ಯ ಅಧ್ಯಕ್ಷರೆ. ಈ ಒಂದು ಚರ್ಚೆಯಲ್ಲಿ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. 2013ನೇ ಸಾಲಿನ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಕರ್ನಾಟಕದ ಜನತೆ ಹೊಸ ಆಶೋತ್ತರಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸರ್ಕಾರದ ರಚನೆಗೆ ಅವಕಾಶ ಮಾಡಿಕೊಟ್ಟಿದ್ದಾರೆನ್ನತಕ್ಕಂಥ ಮಾತನ್ನು ಸರ್ಕಾರ ಹೇಳಿದೆ. ಜನ ಬದಲಾವಣೆ ಬಯಸಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಬದಲಾವಣೆ ಬಯಸುವುದರ ಜೊತೆಗೆ ಹಿಂದಿನ ಸರ್ಕಾರಗಳು ಮಾಡಿದ ತಪ್ಪಿನಿಂದ ನಮಗೆ ಅವಕಾಶ ಮಾಡಿಕೊಟ್ಟಿದ್ದರು. ನಮ್ಮದು ಮತ್ತು ಬಿಜೆಪಿ ಯವರ ಸಮ್ಮಿಶ್ರ ಸರ್ಕಾರ ಇತ್ತು. ಅವತ್ತು ಅಧಿಕಾರ ಕೊಡಲಿಲ್ಲ ಎನ್ನುವ ಒಂದೇ ಕಾರಣಕ್ಕೆ ಬಿಜೆಪಿ ಗೆ ಜನ ಜನಾದೇಶವನ್ನು ಕೊಟ್ಟರು. ಈಗ ಮಾನ್ಯ ಯಡಿಯೂರಪ್ಪನವರ ಕಿತ್ತಾಟದಿಂದ ಕಾಂಗ್ರೆಸ್‌ಗೆ ಅಧಿಕಾರ ಬಂತು. ಜನ ಸ್ಪಷ್ಟವಾಗಿ ಆದೇಶ ಮಾಡಿ ಸರ್ಕಾರ ರಚನೆ ಮಾಡಲಿಕ್ಕೆ ಬಹಳ ಉತ್ಸಾಹದಿಂದ ಏನು ಕೊಟ್ಟಿಲ್ಲ. ಯಾರೋ ಮಾಡಿದ ತಪ್ಪಿಗೆ ಯಾರಿಗೋ ಅವಕಾಶವನ್ನು